ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 43 ಗ್ರಾನೀಸ (4) 2016

2ನೇ ಮಹಡಿ, 'E' Block,
K.H.B Complex, ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು-09, ದಿನಾಂಕ:15.02.2017.

**ಇವರಿಂದ :**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,

| **ಅತಿ ಪ್ರಾಮುಖ್ಯವಾದುದು** |
|---|
| **ಕಾಲಮಿತಿ** |

**ಇವರಿಗೆ :**
ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ನ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

**ಮಾನ್ಯರೆ,**

ವಿಷಯ: ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರನ್ನು ಸಕಾಲದಲ್ಲಿ ಒದಗಿಸಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಗ್ರಾಮವಾರು ಕುಡಿಯುವ ನೀರಿನ ಮೂಲಗಳ ಪರಿಶೋಧನೆ (Audit) ಮಾಡುವ ಕುರಿತು.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಸತತವಾಗಿ ಮಳೆ ವಿಫಲವಾಗಿರುವುದರಿಂದ ತೀವ್ರ ಬರ ಪರಿಸ್ಥಿತಿ ಉಂಟಾಗಿರುತ್ತದೆ. 2016-17ನೇ ಸಾಲಿನಲ್ಲಿ ಮುಂಗಾರು ಹಾಗೂ ಹಿಂಗಾರು ಮಳೆ ವಿಫಲವಾಗಿದ್ದು 160 ತಾಲ್ಲೂಕುಗಳನ್ನು ಬರಪೀಡಿತವೆಂದು ಸರ್ಕಾರ ಘೋಷಿಸಿರುತ್ತದೆ. ಘೋಷಣೆಯಾಗಿರುವ ತಾಲ್ಲೂಕುಗಳ ಜೊತೆಗೆ ಉಳಿದ ತಾಲ್ಲೂಕುಗಳಲ್ಲಿಯೂ ಸಹ ಬರದ ಛಾಯೆ ಆವರಿಸಿರುತ್ತದೆ. ಆದ್ದರಿಂದ ಕುಡಿಯುವ ನೀರಿನ ಅಭಾವ ಉಂಟಾಗಿದ್ದು, ಅಂತರ್ಜಲ ಮಟ್ಟ ಕುಸಿದಿದ್ದು, ಜಲಮೂಲಗಳು ನಿರಂತರವಾಗಿ ಬತ್ತಿಹೋಗುತ್ತಿರುವುದನ್ನು ಹಾಗೂ ಆ ಮೂಲಕ ಕುಡಿಯುವ ನೀರಿಗೆ ಗ್ರಾಮಸ್ಥರು ತೊಂದರೆ ಅನುಭವಿಸುತ್ತಿರುವುದನ್ನು ಎಲ್ಲಾ ಚುನಾಯಿತ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಸರ್ಕಾರದ ಗಮನಕ್ಕೆ ತರುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಮುಂದಿನ ಬೇಸಿಗೆಯಲ್ಲಿ ಕುಡಿಯುವ ನೀರಿನ ಕೊರತೆಯನ್ನು ನೀಗಿಸುವುದು ಹಾಗೂ ಸಮರ್ಪಕವಾಗಿ ಕುಡಿಯುವ ನೀರು ಒದಗಿಸುವುದು ಒಂದು ಬಹು ದೊಡ್ಡ ಸವಾಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಜಿಲ್ಲಾಡಳಿತ ಸನ್ನದ್ಧರಾಗಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಪ್ರತಿ ಗ್ರಾಮ/ಜನವಸತಿಯ ಹಾಲಿ ಕುಡಿಯುವ ನೀರಿನ ಸ್ಥಿತಿಗತಿ ಹಾಗೂ ಸಂಕಷ್ಟದ ಸಂದರ್ಭವನ್ನು ನಿಭಾಯಿಸಲು ಗ್ರಾಮ ಪಂಚಾಯತವಾರು ಕುಡಿಯುವ ನೀರಿನ ಜಲ ಪರಿಶೋಧನಾ ವರದಿಯ(Drinking Water Audit)ನ್ನು ತಯಾರಿಸಿ ಈ ಪತ್ರದೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ದಿನಾಂಕ:28.02.2017ರೊಳಗಾಗಿ ಸಲ್ಲಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,

(ಡಾ. ನಾಗಾಂಬಿಕಾದೇವಿ ಎನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ.

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 1ನೇ ಮಹಡಿ, 'E' Block, K.H.B Complex, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-09ರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕೋರಿ ಸಲ್ಲಿಸಿದೆ.
2. ರಾಜ್ಯದ ಎಲ್ಲಾ (30) ಜಿಲ್ಲಾಧಿಕಾರಿರವರುಗಳ ಮಾಹಿತಿಗಾಗಿ ಮತ್ತು ಜರೂರು ಕ್ರಮಕ್ಕಾಗಿ ಕಳುಹಿಸಿದೆ.
3. ರಾಜ್ಯದ ಎಲ್ಲಾ (30) ಕಾರ್ಯಪಾಲಕ ಇಂಜಿನಿಯರ್‌ಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ರವರುಗಳ ಮಾಹಿತಿಗಾಗಿ ಮತ್ತು ಜರೂರು ಕ್ರಮಕ್ಕಾಗಿ ಕಳುಹಿಸಿದೆ.

## ಸಮರ್ಪಕವಾಗಿ ಎಲ್ಲಾ ಗ್ರಾಮೀಣ ಜನರಿಗೆ ಕುಡಿಯುವ ನೀರನ್ನು ಒದಗಿಸಲು ಜಿಲ್ಲಾ ಆಡಳಿತ ತೆಗೆದುಕೊಂಡಿರುವ ಕ್ರಮದ ವಿವರಗಳು:

ತಾಲ್ಲೂಕು:............................................ ಜಿಲ್ಲೆ:..............................

| ಕ್ರ. ಸಂ | ಗ್ರಾಮ ಪಂಚಾಯಿತಿ | ಗ್ರಾಮ / ಜನವಸತಿ ಹೆಸರು | ನೀರು ಒದಗಿಸುತ್ತಿರುವ ಜಲಮೂಲಗಳು | | | | | ಒದಗಿಸುತ್ತಿರುವ ಪ್ರಮಾಣ (LPCD) | ಸಂಕಷ್ಟಕರ ಸಂದರ್ಭದಲ್ಲಿ ಸಂಬಂಧಿಸಿದ ಗ್ರಾಮದಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮ | | | | ಷರಾ |
|---|---|---|---|---|---|---|---|---|---|---|---|---|---|
| | | | ಕೈ ಪಂಪು | ಕಿರು ನೀರು ಸರಬರಾಜು (MWS) | ಕೊಳವೆ ನೀರು ಸರಬರಾಜು (PWS) | ಬಹುಗ್ರಾಮ ಕುಡಿಯುವ ನೀರು ಸರಬರಾಜು (MVS) | ಇತರೆ | | ಬೋರ್‌ವೆಲ್ ಆಳಗೊಳಿಸುವಿಕೆ | ಖಾಸಗಿ ಬೋರ್‌ವೆಲ್ ಸ್ವಾಧೀನದ ಮುಖಾಂತರ | ಟ್ಯಾಂಕರ್ ಮೂಲಕ | ಇತರೆ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |

ಪಂಚಾಯತ್ ಅಭಿವೃದ್ಧಿ ಅಧಿಕಾರಿ | ಸಹಾಯಕ ಕಾರ್ಯಪಾಲಕ ಅಭಿಯಂತರರು | ತಹಶೀಲ್ದಾರ್ | ಕಾರ್ಯನಿರ್ವಾಹಕ ಅಧಿಕಾರಿ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು..........................................ಜಿಲ್ಲೆ   ಜಿಲ್ಲಾಧಿಕಾರಿಗಳು..........................................ಜಿಲ್ಲೆ